ಶ್ರೀ ಎಲ್. ಟಿ. ಶಿವಪ್ಪ ಹೆಗಡೆ. ಈ ಬಗ್ಗೆ ಮಾನ್ಯ ಮಂತ್ರಿಗಳನ್ನೂ ನೋಡಲಾಗಿದೆ. ಆ ಭಾಗದ ಜನರು ಸಂಚಾರ ಯೋಗ್ಯ ರಸ್ತೆಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ತಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಹಣವಿಲ್ಲದ ಕಾರಣ, ಈ ರಸ್ತೆಗಳು ದುರಸ್ತಿಯಾಗದೆ ಹಾಗೆಯೇ ಉಳಿದಿವೆ. ಈಗಲಾದರೂ ಲೋಕೋಪಯೋಗಿ ಇಲಾಖೆಯವರು ಇದನ್ನು ತಮ್ಮ ವಶಕ್ಕೆ ತೆಗೆದುಕೊಂಡು ದುರಸ್ತಿ ಪಡಿಸಲು ಪ್ರಯತ್ನ ಮಾಡುವರೆ ?

ಶ್ರೀ ಎಸ್. ಬಂಗಾರಪ್ಪ —ನಿಜ, ನಾನೂ ಕೂಡ ಅಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಅನೇಕ ರಸ್ತೆಗಳನ್ನು ನೋಡಿದ್ದೇನೆ. ಇವುಗಳ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಪುಃ ಈ ರಸ್ತೆಗಳನ್ನು ಪಹಿಸಿಕೊಡುವುದರಿಂದ ದುರಸ್ತಿ ಕೆಲಸಗಳು ಆಗುತ್ತವೆಯೆಂ ಏನೋ ಎನ್ನುವ ಅನುಮಾನವು ಇದೆ. ಆದುದರಿ ದ. ಇದರ ಸಾಧಕ ಭಾ ದ ಗಳನ್ನು ವಿಚಾರ ಮಾಡಿ, ಆದಷ್ಟು ಜಾಗ್ರತೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು.

Lift Irrigation Scheme at Haraganahalli, Krishnaraj pet Taluk

452 SRI S. M. LINGAPPA (Krishnarajpet).—Will the Minister for Minor Irrigation be pleased to state :—

(a) whether a lift irrigation scheme near Haraganahally, Krishnaraj pet taluk has been prepared ;

(b) when the said Estimate was prepared ;

(c) the steps taken by the Government in this behalf ?

SRI D. B. CHANDREGOWDA (Minister for Minor Irrigation).—

(a) Yes

(b) During the year 1975-76.

(c) The land coming under the lift irrigation scheme has been included in the Hemavathi Left Bank atchkat, therefore there is no need for this scheme.

ಶ್ರೀ ಎಸ್. ಎಂ ಲಿಂಗಪ್ಪ —ಈ ಯಾತ ನೀರಾವರಿ ಯೋಜನೆಗೆ ಮಾಡಲಾಗಿದ್ದ ಅಂದಾಜು ಎಷ್ಟು ಎಂದು ಮಾನ್ಯ ಸಚಿವರು ತಿಳಿಸುವರೆ ?

† ಶ್ರೀ ಡಿ. ಬಿ. ಚಂದ್ರೇಗೌಡ.—ಈ ಯೋಜನೆಗೆ ಅಂದಾಜು ತಯಾರು ಮಾಡಲಿಲ್ಲ. ಈ ಯೋಜನೆ ಹೆ ಮಾವತಿ ಎಡದಂಡೆ ನಾಲೆ ಕೆಳಗಡೆ ಬರುವ ಅಚ್ಚುಕಟ್ಟು ಪ್ರದೇಶಕ್ಕೆ ಸೇರಿರುವುದರಿಂದ, ತಾಂತ್ರಿಕ ವರದಿಯನ್ನು ಪೂರ್ಣವಾಗಿ ಸಿದ್ಧ ಮಾಡಲಿಲ್ಲ.

ಶ್ರೀ ಎಸ್ ಎಂ. ಲಿಂಗಪ್ಪ —ಸ್ವಾಮಿ ಈ ಗ್ರಾಮಕ್ಕೆ ಸೇರಿರುವ ಉತ್ಕೃಷ್ಟವಾದ ಜಮೀನು ಕೃಷ್ಣರಾಜ ಸಾಗರ ಜಲಾಶಯ ದಲ್ಲಿ ಮುಳುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧ ಇದ್ದಂತೆ ಕಾಣುವುದಿಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಅಲ್ಲಿರತಕ್ಕವರು ನೂರಕ್ಕೆ ನೂರರಷ್ಟು ಬಡವರು ಸಣ್ಣ ರೈತರು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಡಿ. ಬಿ. ಚಂದ್ರೇಗೌಡ.—ಎಡದಂಡೆ ನಾಲೆಗೆ ಸೇರಿಸುವುದಕ್ಕೆ ಅದು ಕಾರಣ ಇರಬೇಕು.

ಶ್ರೀ ಎಸ್. ಎಂ. ಲಿಂಗಪ್ಪ.—ಎಡದಂಡೆ ನಾಲೆ ಪೂರೈಸಿ ಎಷ್ಟು ವರ್ಷದಲ್ಲಿ ನೀರು ಕೊಡುತ್ತೀರಾ ?

ಶ್ರೀ ಡಿ. ಬಿ. ಚಂದ್ರೇಗೌಡ.—ಇದು ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರವಲ್ಲ, ಉತ್ತರ ಕೊಡುವುದು ಕಷ್ಟ.